**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,**

**ಅರಕಲಗೂಡು**

( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ25/07/2025**

ಅಸಲು ದಾವೆ. ನಂ. *195/2017*

ಡಿ.ಡಬ್ಲ್ಯೂ-*4*

(ಪಾಟೀ ಸವಾಲು ಶ್ರೀ ಕೆ.ಕೆ. ವಕೀಲರಿಂದ ವಾದಿಯ ಪರವಾಗಿ )

ನನ್ನ ಹೆಸರು ಕುಮಾರ ಸ್ವಾಮಿ. ತಂದೆಯ ಹೆಸರು ಮೈಲಾರ ಶೆಟ್ಟಿ. ದಾವಾ ಸ್ವತ್ತಿನ ಕ್ರಯಪತ್ರವು ದಿಃ 08.01.2011ರಲ್ಲಿ ನೊಂದಣಿಯಾಗಿರುತ್ತದೆ. ದಾವಾ ಸ್ವತ್ತು ನನಗೆ ಗ್ರಾಮ ಪಂಚಾಯಿತಿಯಿಂದ ಬಂದಿತು. ಸದರಿ ಗ್ರಾಮ ಪಂಚಾಯಿತಿಯಿಂದ ದಾವಸ್ವತ್ತನ್ನು ಪಡೆದಿರುವುದಕ್ಕೆ ನನ್ನ ಬಳಿ ದಾಖಲಾತಿ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕ್ರಯಪತ್ರದಲ್ಲಿ ದಾವಾಸ್ವತ್ತು ನನ್ನ ಸ್ವಯಾರ್ಜಿತ ಎಂದು ನಮೂದು ಇದೆ ಎಂದರೆ ಸಾಕ್ಷಿ ಪಂಚಾಯಿತಿಯಿಂದ ಅದನ್ನು ನನಗೆ ಕೊಟ್ಟ ನಂತರ ಅದು ನನ್ನ ಸ್ವಯಾರ್ಜಿತವಾಯಿತು ಎಂದು ನುಡಿಯುತ್ತಾರೆ. ಒಂದು ಲಕ್ಷ ರೂಗಳಿಗೆ ಸದರಿ ಸ್ವತ್ತನ್ನು ಕ್ರಯ ಮಾಡಿರುತ್ತೇನೆ. ನಿವೇಶನದ ಖಾತೆ ನಂ. 626 ಆಗಿರುತ್ತದೆ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ **30 x 40** ಅಡಿ ಆಗಿರುತ್ತದೆ. ಸದರಿ ಸ್ವತ್ತಿನ ಚಕ್ಕುಬಂದಿ ಎಂದರೆ ಪೂರ್ವಕ್ಕೆ ಕಾಳನಾಯಕ ಜಯಮ್ಮ ನವರ ನಿವೇಶನ, ಪಶ್ಚಿಮಕ್ಕೆ ಕಾಲುವೆ, ಉತ್ತರಕ್ಕೆ ಮಂಜರವರ ನಿವೇಶನ, ದಕ್ಷಿಣಕ್ಕೆ ರಸ್ತೆ ಇರುತ್ತದೆ. ಸದರಿ ದಾವಾಸ್ವತ್ತಿಗೆ ನಾನು 7- 8 ವರುಷದವರೆಗೂ ಕಂದಾಯ ಪಾವತಿಸಿರುತ್ತೇನೆ. ನಾನು ಕ್ರಯಕ್ಕೆ ಮಾಡುವ ಮೊದಲು ದಾವಾ ಸ್ವತ್ತಿನ ಸಂಖ್ಯೆ 807 ಆಗಿತ್ತು. ದಾವಾಸ್ವತ್ತನ್ನು ಯಾವ ಯೋಜನೆಯಲ್ಲಿ ನಿಮಗೆ ನೀಡಿದ್ದರೂ ಎಂದರೆ ಸಾಕ್ಷಿಯು ಎಂ.ಎಲ್. ಎ ರಾಮಸ್ವಾಮಿ ರವರು ನನಗೆ ಹಕ್ಕುಪತ್ರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವಾ ಸ್ವತ್ತಿನ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಪ್ರತಿ ವಾದಿಯರಿಗೆ ಕ್ರಯಕ್ಕೆ ಕೊಡುವಾಗ ದಾವಾ ಸ್ವತ್ತು ಖಾಲಿ ನಿವೇಶನವಾಗಿತ್ತು. ದಾವಾ ಸ್ವತ್ತು ಆಶ್ರಯ ಯೋಜನೆಯಡಿಯಲ್ಲಿ ಎಲ್.ಎಲ್.ಡಿ.379, 1991-92ನೇ ಸಾಲಿನಲ್ಲಿ ವಾದಿಯರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.

O.S. 195/2017

DW- 4